# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ. ಹೆಚ್. ರಸ್ತೆ, ತುಮಕೂರು-572 103 ☎:0816-2255650,2273511 ಫ್ಯಾಕ್ಸ್:0816-2270719


ಸಂಖ್ಯೆ:ತುವಿ:ಪವಿ:2025-26: 361 ದಿನಾಂಕ:30.07.2025

## : ಅಧಿಸೂಚನೆ :

**ವಿಷಯ** : 2025 ರ ಆಗಸ್ಟ್ ಮಾಹೆಯಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿಗಳ 2017-18 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಡಬಲ್ ದಿ ಡ್ಯೂರೇಷನ್ ಆಫ್ ದಿ ಕೋರ್ಸ್ ಪೂರೈಸಿರುವ ವಿದ್ಯಾರ್ಥಿಗಳ ಹಾಗೂ 2019-20 & 2020-21 ನೇ ಶೈಕ್ಷಣಿಕ ಸಾಲಿನಲ್ಲಿನ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರ ಘೋಷಣೆ ಹಾಗೂ ಪರೀಕ್ಷಾ ಮುಖ್ಯ ಅಧೀಕ್ಷಕರು / ಉಪ ಮುಖ್ಯ ಅಧೀಕ್ಷಕರುಗಳ ನೇಮಕಾತಿ ಕುರಿತು.

**ಉಲ್ಲೇಖ** : ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ : 28.07.2025

*****

ತುಮಕೂರು ವಿಶ್ವವಿದ್ಯಾನಿಲಯದ 2024-25 ನೇ ಶೈಕ್ಷಣಿಕ ಸಾಲಿನ 2025 ರ ಆಗಸ್ಟ್ ಮಾಹೆಯಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿಗಳಾದ ಬಿ.ಎ./ಬಿ.ಎಸ್ಸಿ./ಬಿ.ಕಾಂ./ಬಿ.ಬಿ.ಎಂ./ಬಿ.ಸಿ.ಎ./ಬಿ.ಎಸ್.ಡಬ್ಲ್ಯೂ./ಬಿ.ಎಸ್ಸಿ.(ಫ್ಯಾಷನ್ ಅಂಡ್ ಅಪಾರೆಲ್ ಡಿಸೈನಿಂಗ್) ಹಾಗೂ B.Voc. in Hardware Technology & Networking ಪದವಿಗಳ II, IV & VI ನೇ ಸೆಮಿಸ್ಟರ್ ಮತ್ತು ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಪದವಿಯ VI, VIII & X ನೇ ಸೆಮಿಸ್ಟರ್‌ನ ಡಬಲ್ ದಿ ಡ್ಯೂರೇಷನ್ ಆಫ್ ದಿ ಕೋರ್ಸ್ ಪೂರೈಸಿರುವ ವಿದ್ಯಾರ್ಥಿಗಳ (2017-18 ನೇ ಶೈಕ್ಷಣಿಕ ಸಾಲಿನ ಬ್ಯಾಚ್), 2019-20 & 2020-21 ನೇ ಶೈಕ್ಷಣಿಕ ಸಾಲಿನಲ್ಲಿನ ವಿದ್ಯಾರ್ಥಿಗಳ ಪರೀಕ್ಷೆಗಳು ಈಗಾಗಲೇ ಪ್ರಕಟಿಸಲಾಗಿರುವ ಅಂತಿಮ ಪರೀಕ್ಷಾ ವೇಳಾಪಟ್ಟಿಯಂತೆ ನಡೆಯಲಿವೆ.

ಪ್ರಸ್ತುತ ಡಬಲ್ ದಿ ಡ್ಯೂರೇಷನ್ ಆಫ್ ದಿ ಕೋರ್ಸ್ ಪೂರೈಸಿರುವ ವಿದ್ಯಾರ್ಥಿಗಳ (2017-18 ನೇ ಶೈಕ್ಷಣಿಕ ಸಾಲಿನ ಬ್ಯಾಚ್), 2019-20 & 2020-21 ನೇ ಶೈಕ್ಷಣಿಕ ಸಾಲಿನಲ್ಲಿನ ವಿದ್ಯಾರ್ಥಿಗಳ ಸಿ.ಬಿ.ಸಿ.ಎಸ್. ಪರೀಕ್ಷೆಗಳಿಗೆ ಮಾತ್ರ (ಎನ್.ಇ.ಪಿ. ಪರೀಕ್ಷೆಗಳನ್ನು ಹೊರತುಪಡಿಸಿ) ಈ ಅಧಿಸೂಚನೆಗೆ ಲಗತ್ತಿಸಿರುವ **"ANNEXURE-01"** ರಂತೆ ಪರೀಕ್ಷಾ ಕೇಂದ್ರಗಳನ್ನು ಘೋಷಿಸಲಾಗಿದ್ದು, ಪರೀಕ್ಷಾ ಕೇಂದ್ರಗಳನ್ನಾಗಿ ಘೋಷಿಸಲಾಗಿರುವ ಕಾಲೇಜುಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳನ್ನು **ಪರೀಕ್ಷಾ ಮುಖ್ಯ ಅಧೀಕ್ಷಕರು (Examination Chief Superintendent)** ಗಳೆಂದು ನೇಮಕಾತಿ ಮಾಡಲಾಗಿದೆ.

ಪರೀಕ್ಷಾ ಕೇಂದ್ರದ ಕಾಲೇಜುಗಳಿಗೆ ಜೋಡಣೆ ಮಾಡಲಾದ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಹಾಗೂ ಇನ್ನಿತರ ಮಾಹಿತಿಗಳನ್ನು ಪರೀಕ್ಷಾ ಮುಖ್ಯ ಅಧೀಕ್ಷಕರುಗಳಿಗೆ ಒದಗಿಸಬೇಕು ಮತ್ತು **ತಮ್ಮ ಕಾಲೇಜಿನ ಅಧ್ಯಾಪಕರುಗಳನ್ನು ಪರೀಕ್ಷಾ ಕಾರ್ಯಗಳಿಗೆ ನಿಯೋಜಿಸಿ** ಪರೀಕ್ಷೆಗಳು ಸುಗಮವಾಗಿ ನಡೆಯಲು ಎಲ್ಲಾ ಸಹಕಾರಗಳನ್ನು ನೀಡತಕ್ಕದ್ದು.

**ಉಪ ಮುಖ್ಯ ಅಧೀಕ್ಷಕರು**ಗಳನ್ನು ಪ್ರಾಂಶುಪಾಲರುಗಳು ಸೂಚಿಸಿದಂತೆ ಈ ಕೆಳಗಿನಂತೆ ಸಿ.ಬಿ.ಸಿ.ಎಸ್. ಪರೀಕ್ಷೆಗಳಿಗೆ ನೇಮಕಾತಿ ಮಾಡಲಾಗಿದೆ.

| ಕ್ರ. ಸಂ. | **ಪರೀಕ್ಷಾ ಕೇಂದ್ರ** | **ಉಪ ಮುಖ್ಯ ಅಧೀಕ್ಷಕರುಗಳ ಹೆಸರು** |
|---|---|---|
| 01 | ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು. | ಡಾ. ಪಲ್ಲವಿ ಎಸ್ ಕುಸುಗಲ್ಲ, ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ. (ಮೊಬೈಲ್ ಸಂಖ್ಯೆ : 9964317202) |
| 02 | ಸಿ. ಐ. ಟಿ. ಪ್ರಥಮ ದರ್ಜೆ ಕಾಲೇಜು, ಗುಬ್ಬಿ. | ಡಾ. ಜಯರಾಜು ವಿ., ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ. (ಮೊಬೈಲ್ ಸಂಖ್ಯೆ : 9964708608) |

| | | |
|---|---|---|
| 03 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು. | 1. ಸೌಮ್ಯ ಟಿ.ಎಸ್., ಸಹ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ. (ಮೊಬೈಲ್ ಸಂಖ್ಯೆ : 9986242924)<br>2. ಶ್ರೀ ನಾಗರಾಜು ಬಿ.ಎಸ್., ದೈಹಿಕ ಶಿಕ್ಷಣ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ. (ಮೊಬೈಲ್ ಸಂಖ್ಯೆ : 9844314495) |
| 04 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ತುರುವೇಕೆರೆ. | 1. ಶ್ರೀ ಕೃಷ್ಣಮೂರ್ತಿ, ಗ್ರಂಥಪಾಲಕರು. (ಮೊಬೈಲ್ ಸಂಖ್ಯೆ : 9886930441)<br>2. ಶ್ರೀಮತಿ ಕೃಷ್ಣವೇಣಿ, ದೈಹಿಕ ಶಿಕ್ಷಣ ನಿರ್ದೇಶಕರು. (ಮೊಬೈಲ್ ಸಂಖ್ಯೆ : 9481400627) |
| 05 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್. | ಶ್ರೀ ಲಕ್ಷ್ಮೀಶ ಹೆಚ್., ಗ್ರಂಥಪಾಲಕರು (ಮೊಬೈಲ್ ಸಂಖ್ಯೆ : 9980228631) |
| 06 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ. | 1. ಶ್ರೀಮತಿ ಸುಕನ್ಯ ಟಿ.ಎಲ್., ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ. (ಮೊಬೈಲ್ ಸಂಖ್ಯೆ : 9480711473)<br>2. ಶ್ರೀ ಸಿದ್ಧಗಂಗಯ್ಯ ಕೆ.ಎನ್., ಆಯ್ಕೆ ಶ್ರೇಣಿ ಗ್ರಂಥಪಾಲಕರು. (ಮೊಬೈಲ್ ಸಂಖ್ಯೆ : 8710933380) |
| 07 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ. | 1. ಶ್ರೀ ಮುರುಳೀಧರ ಕೆ., ದೈಹಿಕ ಶಿಕ್ಷಣ ನಿರ್ದೇಶಕರು. (ಮೊಬೈಲ್ ಸಂಖ್ಯೆ : 9964254365)<br>2. ಶ್ರೀ ರಾಮಮೂರ್ತಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ. |
| 08 | ಶ್ರೀಮತಿ ಮತ್ತು ಶ್ರೀ ವೈ. ಇ. ರಂಗಯ್ಯ ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ. | 1. ಶ್ರೀ ಹನುಮಂತರಾಯಪ್ಪ ಎ., ದೈಹಿಕ ಶಿಕ್ಷಣ ನಿರ್ದೇಶಕರು, (ಮೊಬೈಲ್ ಸಂಖ್ಯೆ : 9538121285)<br>2. ಶ್ರೀ ನಂದೀಶ ಹೆಚ್.ಎಸ್., ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ. (ಮೊಬೈಲ್ ಸಂಖ್ಯೆ : 9535802580) |

**ಎಲ್ಲಾ ಪರೀಕ್ಷಾ ಕೇಂದ್ರಗಳ ಪರೀಕ್ಷಾ ಮುಖ್ಯ ಅಧೀಕ್ಷಕರುಗಳು/ ಉಪ ಮುಖ್ಯ ಅಧೀಕ್ಷಕರುಗಳು ಕೋವಿಡ್ - 19 ರ ಪ್ರಯುಕ್ತ ಕರ್ನಾಟಕ ಸರ್ಕಾರದ ಮತ್ತು ಯು.ಜಿ.ಸಿ. ಯ ಇತ್ತೀಚಿನ ಪರೀಕ್ಷಾ ಮಾರ್ಗಸೂಚಿಗಳನುಸಾರವಾಗಿ ಪರೀಕ್ಷೆಗಳನ್ನು ನಡೆಸಲು ಅಗತ್ಯ ಕ್ರಮ ಕೈಗೊಂಡು ಪರೀಕ್ಷಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು.**

ಪರೀಕ್ಷಾ ಮುದ್ರಣ ಸಾಮಾಗ್ರಿಗಳನ್ನು ಹೊರತು ಪಡಿಸಿ ಉಳಿದ ಪರೀಕ್ಷಾ ಲೇಖನ ಸಾಮಾಗ್ರಿಗಳನ್ನು ವಿದ್ಯಾರ್ಥಿಗಳಿಂದ ಪಡೆಯುವ ಅರ್ಜಿ ಪರಿಶೀಲನಾ ಶುಲ್ಕ (Scrutiny Fees) ರೂ. 10-00/- ರ ಶುಲ್ಕದಲ್ಲಿ ರೂ. 06.00 ನ್ನು ಉಪಯೋಗಿಸಿಕೊಂಡು ಉಳಿದ ರೂ 04.00 ನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯಕ್ಕೆ ಪಾವತಿಸುವುದು. ಪರೀಕ್ಷಾ ಕೇಂದ್ರಕ್ಕೆ ಜೋಡಣೆ ಮಾಡಲಾದ ಕಾಲೇಜಿನವರು ಸಂಬಂಧಿಸಿದ ಪರೀಕ್ಷಾ ಕೇಂದ್ರಕ್ಕೆ ಅರ್ಜಿ ಪರಿಶೀಲನಾ ಶುಲ್ಕವನ್ನು ಪಾವತಿಸುವುದು.

ಪರೀಕ್ಷಾ ಕಾರ್ಯಗಳಲ್ಲಿ ಏನಾದರೂ ಸಮಸ್ಯೆಗಳು ಉಂಟಾದಲ್ಲಿ ಕೂಡಲೇ **ಮಾನ್ಯ ಕುಲಸಚಿವರು(ಪರೀಕ್ಷಾಂಗ) ದೂರವಾಣಿ ಸಂಖ್ಯೆ:9916007211, ಉಪಕುಲಸಚಿವರು(ಪರೀಕ್ಷಾಂಗ):9739482878, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರುಗಳನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳುವುದು.

**ಪರೀಕ್ಷಾ ಮುಖ್ಯ ಅಧೀಕ್ಷಕರುಗಳಿಗೆ (Examination Chief Superintendent) ಸೂಚನೆಗಳು :**

1. ಪರೀಕ್ಷಾ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುವವರು ಪರೀಕ್ಷಾ ದಿನದಂದು ಪರೀಕ್ಷಾ ಸಮಯಕ್ಕಿಂತ **ಒಂದು ಗಂಟೆ ಮುಂಚಿತವಾಗಿ** ಕಾಲೇಜಿಗೆ ಬಂದು ಮೊಹರು ಮಾಡಿದ ಪ್ರಶ್ನೆ ಪತ್ರಿಕೆ ಲಕೋಟೆಯನ್ನು ತಮ್ಮ ಸಮ್ಮುಖದಲ್ಲೇ ತೆರೆದು ಪರೀಕ್ಷಾ ಕೊಠಡಿಗೆ ವಿತರಿಸುವ ವ್ಯವಸ್ಥೆ ಮಾಡಬೇಕು. ಮುಖ್ಯ ಅಧೀಕ್ಷಕರು ಇಲ್ಲದೆ ಇದ್ದಾಗ ಅನಧಿಕೃತವಾಗಿ ಬೇರೆ ಯಾರೂ ಕೂಡ ಪ್ರಶ್ನೆ ಪತ್ರಿಕೆಗಳ ಲಕೋಟೆಯನ್ನು ತೆರೆಯಬಾರದು. ಒಂದು ವೇಳೆ ತೆರೆದಲ್ಲಿ ಮುಖ್ಯ ಅಧೀಕ್ಷಕರನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು.

2. ಪ್ರಾಂಶುಪಾಲರು ಕಾಲೇಜಿನ ಹಿರಿಯ ಅಧ್ಯಾಪಕರಿಗೆ ಮುಖ್ಯ ಅಧೀಕ್ಷಕರ ಜವಾಬ್ದಾರಿ ವಹಿಸಿ ಪರೀಕ್ಷಾ ಕಾರ್ಯದಿಂದ ಗೈರು ಹಾಜರಾಗುವುದು. ಪರೀಕ್ಷಾ ದಿನಗಳಂದು ತಡವಾಗಿ ಕಾಲೇಜಿಗೆ ಬರುವುದು, ಪರೀಕ್ಷಾ ದಿನಗಳಲ್ಲಿ ಪ್ರಶ್ನೆ ಪತ್ರಿಕೆ ವಿತರಿಸುವ ಜವಾಬ್ದಾರಿಯನ್ನು ಕಾಲೇಜಿನ ಅಧ್ಯಾಪಕರಿಗೆ ನಿರ್ವಹಿಸುವಂತೆ ಸೂಚಿಸಿ, ಪರೀಕ್ಷೆಗಳು ಮುಗಿಯುವುದಕ್ಕೆ ಮುಂಚಿತವಾಗಿ ಕಾಲೇಜಿನಿಂದ ಹೊರ ಹೋಗುವುದು ಕಂಡುಬಂದಿರುತ್ತದೆ. ಆದ್ದರಿಂದ ಈ ರೀತಿ ಆಗದಂತೆ ಎಚ್ಚರವಹಿಸುವುದು.
3. ಪರೀಕ್ಷಾ ಮುಖ್ಯ ಅಧೀಕ್ಷಕರು ಉಪ ಮುಖ್ಯ ಅಧೀಕ್ಷಕರುಗಳಲ್ಲಿ ದಿನವೊಂದಕ್ಕೆ ಒಬ್ಬರನ್ನು ಮಾತ್ರ ಉಪ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುವಂತೆ ನೇಮಕ ಮಾಡಿಕೊಳ್ಳುವುದು. ಮಾಹಿತಿಯನ್ನು ಮಾನ್ಯ ಕುಲಸಚಿವರು(ಮೌಲ್ಯಮಾಪನ) ಇವರಿಗೆ ನೀಡುವುದು.
4. ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ಮೊಬೈಲ್ ಫೋನ್‌ಗಳನ್ನು ಉಪಯೋಗಿಸುವುದು / ಪ್ರದರ್ಶಿಸುವುದು ಹಾಗೂ ಕಾಲೇಜಿಗೆ ತರುವುದನ್ನು ನಿಷೇಧಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಈ ಅಧಿಸೂಚನೆಯೊಂದಿಗೆ ನೀಡಿರುವ ಸೂಚನೆಗಳನ್ನು ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು ಮತ್ತು ಈ ಬಗ್ಗೆ ಕ್ರಮವಹಿಸುವುದು.
5. ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿ ಮುಗಿಯುವವರೆಗೆ ಪ್ರಶ್ನೆ ಪತ್ರಿಕೆಗಳನ್ನು ಹೊರಗಡೆ ತೆಗೆದುಕೊಂಡು ಹೋಗಲು ನೀಡಬಾರದು.
6. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರಕ್ಕೆ ಜೋಡಣೆ ಮಾಡಲಾದ ಕಾಲೇಜುಗಳ ಹಾಗೂ ಪರೀಕ್ಷಾ ಕೇಂದ್ರದಲ್ಲಿರುವ ಖಾಯಂ ಅಧ್ಯಾಪಕರುಗಳನ್ನೇ ಕಡ್ಡಾಯವಾಗಿ ಬಳಸಿಕೊಳ್ಳುವುದು. ಅಗತ್ಯವಿದ್ದಲ್ಲಿ ಮಾತ್ರ ಅತಿಥಿ ಉಪನ್ಯಾಸಕರುಗಳನ್ನು ಬಳಸಿಕೊಳ್ಳುವುದು.
7. ಜಾಗೃತದಳದವರು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದಾಗ ಮಾನ್ಯ ಕುಲಸಚಿವರು(ಪರೀಕ್ಷಾಂಗ) ಇವರ ಆದೇಶದಂತೆ ಕಾರ್ಯ ನಿರ್ವಹಿಸುತ್ತಾರೆ. ಅವರಿಗೆ ಸಂಪೂರ್ಣ ಸಹಕಾರ ನೀಡುವುದು ಮುಖ್ಯ ಅಧೀಕ್ಷಕರು ಹಾಗೂ ಕಾಲೇಜಿನ ಅಧ್ಯಾಪಕರ ಜವಾಬ್ದಾರಿಯಾಗಿರುತ್ತದೆ.
8. ಯಾವುದೇ ಕಾರಣಕ್ಕೂ ಪರೀಕ್ಷಾ ಅಕ್ರಮಗಳು ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಮತ್ತು ಪರೀಕ್ಷಾ ಪಾವಿತ್ರತೆಯನ್ನು ಕಾಪಾಡುವುದು ತಮ್ಮ ಹೊಣೆಗಾರಿಕೆಯಾಗಿರುತ್ತದೆ.
9. Question Paper Code ಗೆ ಅನುಸಾರವಾಗಿ ಉತ್ತರ ಪುಸ್ತಕಗಳನ್ನು Room Superintendents Invigilation Dairy ಯೊಂದಿಗೆ ಪ್ಯಾಕ್ ಮಾಡುವುದು ಹಾಗೂ ಆ ಪ್ಯಾಕ್‌ನ ಮೇಲೆ ದಿನಾಂಕ, ವಿಷಯ, ಕಾಲೇಜಿನ ಕೋಡ್, ಕಾಲೇಜಿನ ಹೆಸರು ಮತ್ತು ವಿಳಾಸ, Question Paper Code ನ್ನು ಹಾಗೂ ಬಂಡಲ್‌ನಲ್ಲಿರುವ ಒಟ್ಟು ಉತ್ತರ ಪತ್ರಿಕೆಗಳ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.
10. ಪ್ರಶ್ನೆ ಪತ್ರಿಕೆಗಳು ಯಾವ ಕಾರಣಕ್ಕೂ ಪರೀಕ್ಷೆಯ ಸಮಯಕ್ಕಿಂತ ಮುಂಚೆ ಬಹಿರಂಗಗೊಳ್ಳದಂತೆ ಪ್ರಾಂಶುಪಾಲರು/ಮುಖ್ಯ ಅಧೀಕ್ಷಕರು ಸುರಕ್ಷಿತವಾಗಿ ಸಂರಕ್ಷಿಸುವುದು. ಗೌಪ್ಯತೆ ಕಾಪಾಡುವುದಕ್ಕೆ ಮೊದಲ ಆದ್ಯತೆ ನೀಡಲು ತಿಳಿಸಿದೆ.
11. ಪ್ರಾಂಶುಪಾಲರುಗಳು ಪರೀಕ್ಷಾ ದಿನಗಳಲ್ಲಿ ಸಾಂಧರ್ಬಿಕ ರಜೆ/ಇತರೆ ರಜೆ ಮೇಲೆ ತೆರಳುವ ಸಂದರ್ಭದಲ್ಲಿ ಮಾನ್ಯ ಕುಲಸಚಿವರು(ಮೌಲ್ಯಮಾಪನ) ಇವರಿಗೆ ಮಾಹಿತಿ ನೀಡುವುದು.
12. ಹಲವು ರೀತಿಯ ಮುನ್ಸೂಚನೆಗಳನ್ನು ನೀಡಿರುವ ಹೊರತಾಗಿಯು ಪರೀಕ್ಷಾ ಕೊಠಡಿಗಳಲ್ಲಿ ಕೊಠಡಿ ಮೇಲ್ವಿಚಾರಕರು ಪರೀಕ್ಷೆ ನಡೆಯುತ್ತಿರುವ ಸಂದರ್ಭಗಳಲ್ಲಿ ಮೊಬೈಲ್ ಫೋನ್ ಅಥವಾ ಇನ್ನಿತರ ಯಾವುದೇ ಸಂವಹನ ತಂತ್ರಜ್ಞಾನ ಬಳಸುವುದು, ಪುಸ್ತಕಗಳನ್ನು ಓದುವುದು, ಪಕ್ಕದ ಕೊಠಡಿ ಮೇಲ್ವಿಚಾರಕರೊಂದಿಗೆ ಮಾತನಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಹಾಗೂ ಈ ಬಗ್ಗೆ ಜಾಗೃತದಳದವರು ನೀಡುವ ವರದಿಯನ್ನು ವಿಶ್ವವಿದ್ಯಾನಿಲಯವು ಗಂಭೀರವಾಗಿ ಪರಿಗಣಿಸುತ್ತದೆ. ಮೇಲ್ಕಂಡ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಎಲ್ಲಾ ಕೊಠಡಿ ಮೇಲ್ವಿಚಾರಕರ ಮತ್ತು ಅಧ್ಯಾಪಕರುಗಳ ಗಮನಕ್ಕೆ ತರಲು ಸೂಚಿಸಿದೆ.
13. ಸ್ನಾತಕ ಪದವಿ ಪರೀಕ್ಷೆ ನಡೆಯುವ ಕಾಲೇಜುಗಳಲ್ಲಿ ಶುದ್ಧೀಕರಿಸಿದ ಕುಡಿಯುವ ನೀರಿನ ವ್ಯವಸ್ಥೆಯನ್ನು ಪರೀಕ್ಷೆಗಳು ಮುಗಿಯುವ ತನಕ ಕಡ್ಡಾಯವಾಗಿ ಪೂರೈಸುವುದು.

**ಉಪ ಮುಖ್ಯ ಅಧೀಕ್ಷಕರುಗಳ ಕರ್ತವ್ಯಗಳು :**

1. ಪರೀಕ್ಷಾ ದಿನದಲ್ಲಿ ಪರೀಕ್ಷಾ ಮುಖ್ಯ ಅಧೀಕ್ಷಕರಿಗೆ, ಪರೀಕ್ಷೆಗಳನ್ನು ಪಾರದರ್ಶಕತೆಯಿಂದ ನಿಯಮಾನುಸಾರ, ಕ್ರಮಬದ್ಧವಾಗಿ ನಡೆಯಲು ಸಂಪೂರ್ಣ ಸಹಕಾರ ನೀಡುವುದು.

2. ಪ್ರಶ್ನೆ ಪತ್ರಿಕೆಗಳ ಪ್ಯಾಕೆಟ್‌ಗಳನ್ನು ಮುಖ್ಯ ಅಧೀಕ್ಷಕರು **Open** ಮಾಡುವ ಸಂದರ್ಭದಲ್ಲಿ ಹಾಜರಿದ್ದು, ಪ್ರಶ್ನೆ ಪತ್ರಿಕೆಗಳ ಪ್ಯಾಕೆಟ್‌ಗಳು ಸುರಕ್ಷಿತವಾಗಿ ಸಂರಕ್ಷಿಸಲ್ಪಟ್ಟಿವೆಯೇ ಎಂಬುದನ್ನು ದೃಢೀಕರಿಸಿಕೊಂಡು **Question Paper Packet Opening Certificate** ನಮೂನೆಯಲ್ಲಿ ಕಡ್ಡಾಯವಾಗಿ ಸಹಿ ಮಾಡಲೇಬೇಕು ಹಾಗೂ ಪರೀಕ್ಷೆಗಳು ಪೂರ್ಣಗೊಂಡ ನಂತರ ಮಾನ್ಯ ಕುಲಸಚಿವರು(ಮೌ) ರವರಿಗೆ **Spiral Binding** ಮಾಡಿಸಿ ಸಲ್ಲಿಸುವುದು.
3. ಮುಖ್ಯ ಅಧೀಕ್ಷಕರು/ಪ್ರಾಂಶುಪಾಲರು ಅನಿವಾರ್ಯ ಕಾರಣಗಳಿಂದ ರಜೆ ಮೇಲೆ ತೆರಳುವ ಸಂದರ್ಭದಲ್ಲಿ ಮಾತ್ರ, ಮಾನ್ಯ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಮಾಹಿತಿ ನೀಡಿ, ಪರೀಕ್ಷಾ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುವುದು.
4. ಪರೀಕ್ಷಾ ಅಕ್ರಮಗಳು ನಡೆಯದಂತೆ ನೋಡಿಕೊಳ್ಳುವಲ್ಲಿ ಉಪ ಮುಖ್ಯ ಅಧೀಕ್ಷಕರು ದಕ್ಷತೆಯಿಂದ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಬೇಕು.

**ಪ್ರಶ್ನೆ ಪತ್ರಿಕೆಗಳನ್ನು ಸ್ವೀಕರಿಸುವ ಬಗ್ಗೆ ಸೂಚನೆಗಳು :**

1. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆ ನಡೆಯುವ ಹಿಂದಿನ ದಿನ ಆಯಾ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗುವುದು. ಆ ಪ್ರಶ್ನೆ ಪತ್ರಿಕೆಗಳ ಪ್ಯಾಕೆಟ್‌ಗಳನ್ನು ಪ್ರಾಂಶುಪಾಲರು/ಪರೀಕ್ಷಾ ಮುಖ್ಯ ಅಧೀಕ್ಷಕರು ಖುದ್ದಾಗಿ ಪಡೆದು ಸುರಕ್ಷಿತವಾಗಿ ಸಂರಕ್ಷಿಸಿಕೊಳ್ಳತಕ್ಕದ್ದು ಹಾಗಾಗಿ ಪ್ರಾಂಶುಪಾಲರು / ಪರೀಕ್ಷಾ ಮುಖ್ಯ ಅಧೀಕ್ಷಕರು ಪರೀಕ್ಷಾ ದಿನಗಳಲ್ಲಿ ಕಡ್ಡಾಯವಾಗಿ ಕಾಲೇಜಿನಲ್ಲಿ/ಕೇಂದ್ರ ಸ್ಥಳದಲ್ಲಿ ಹಾಜರಿರಲೇಬೇಕು.
2. ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಒಂದು ದಿನ ಮುಂಚಿತವಾಗಿ ಕಳುಹಿಸಿಕೊಡುತ್ತಿರುವುದರಿಂದ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಪ್ರಶ್ನೆ ಪತ್ರಿಕೆಗಳು ದಿನಾಂಕಗಳಿಗೆ ಹೊಂದಿಕೆಯಾಗಿ ಸರಿಯಾಗಿವೆಯೇ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು.
3. ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಉಪ ಅಧೀಕ್ಷಕರನ್ನು ನೇಮಿಸಿಕೊಂಡು ಅವರಿಗೆ ಪರೀಕ್ಷೆ ನಡೆಸುವಂತೆ ಸೂಚಿಸಬಾರದು. ತಾವು ಸೂಚಿಸಿರುವಂತೆ ವಿಶ್ವವಿದ್ಯಾನಿಲಯದ ವತಿಯಿಂದಲೇ **ಉಪ ಮುಖ್ಯ ಅಧೀಕ್ಷಕರುಗಳನ್ನು** ನೇಮಿಸಿದ್ದು, ಪರೀಕ್ಷಾ ದಿನಗಳಲ್ಲಿ ಅವರ ಸಹಕಾರದೊಂದಿಗೆ ಪರೀಕ್ಷೆ ನಡೆಸುವುದು ಪ್ರಾಂಶುಪಾಲರ/ಪರೀಕ್ಷಾ ಮುಖ್ಯ ಅಧೀಕ್ಷಕರ ಮುಖ್ಯ ಕರ್ತವ್ಯವಾಗಿರುತ್ತದೆ.

**ಉತ್ತರ ಪತ್ರಿಕೆಗಳನ್ನು ರವಾನಿಸುವ ಬಗ್ಗೆ ಸೂಚನೆಗಳು:**

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ವಿಶ್ವವಿದ್ಯಾನಿಲಯದಿಂದ ಅಧಿಕೃತವಾಗಿ ನಿಯೋಜಿಸಲ್ಪಟ್ಟವರಿಗೆ ಪ್ರಾಂಶುಪಾಲರು/ಪರೀಕ್ಷಾ ಮುಖ್ಯ ಅಧೀಕ್ಷಕರು ಸೂಕ್ತ ವಿವರಗಳೊಂದಿಗೆ ನೀಡುವುದು.

**ಮೇಲ್ಕಂಡ ಎಲ್ಲಾ ವಿಷಯಗಳು ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ಪರೀಕ್ಷೆಗಳು ಸುಗಮವಾಗಿ ನಡೆಯಲು ಕ್ರಮಕೈಗೊಳ್ಳುವುದು.**

30/7/25
ಕುಲಸಚಿವರು(ಪರೀಕ್ಷಾಂಗ)
ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. **ಪ್ರಾಂಶುಪಾಲರು, ಘಟಕ / ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**
2. ಪರೀಕ್ಷಾ ಮುಖ್ಯ ಅಧೀಕ್ಷಕರು / ಪರೀಕ್ಷಾ ಉಪ ಮುಖ್ಯ ಅಧೀಕ್ಷಕರುಗಳು, **2025** ರ ಆಗಸ್ಟ್ ಮಾಹೆಯಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿ ಸಿ.ಬಿ.ಸಿ.ಎಸ್. ಪರೀಕ್ಷೆಗಳು.

**ಪ್ರತಿಗಳು :**

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಆರನೇ ಮಹಡಿ. ಬಹುಮಹಡಿಗಳ ಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
2. ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಮಾನ್ಯ ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಗಾಂಧಿನಗರ, ಬೆಂಗಳೂರು.
4. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - **ಇಂದೇ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.**
7. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
9. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

**"ANNEXURE – 01"**

**2025 ರ ಆಗಸ್ಟ್ ಮಾಹೆಯಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿಗಳ ಎರಡು, ನಾಲ್ಕು ಮತ್ತು ಆರನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಕೇಂದ್ರಗಳ ವಿವರ.**

**(ಸಿ.ಬಿ.ಸಿ.ಎಸ್. :- ಡಬಲ್ ದಿ ಡ್ಯೂರೇಷನ್ : 2017-18, 2019-20 & 2020-21 ನೇ ಶೈಕ್ಷಣಿಕ ಸಾಲು)**

| ಕ್ರ. ಸಂ. | ಮುಖ್ಯ ಪರೀಕ್ಷಾ ಕೇಂದ್ರಗಳಾಗಿ ಘೋಷಣೆ ಮಾಡಲಾದ ಕಾಲೇಜುಗಳ ಹೆಸರು, ವಿಳಾಸ ಮತ್ತು ಕಾಲೇಜು ಸಂಕೇತ | ಜೋಡಣೆ ಮಾಡಲಾದ ಕಾಲೇಜುಗಳ ಹೆಸರು ಮತ್ತು ವಿಳಾಸ |
|---|---|---|
| 01 | ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು. (1002) | 1. ಸ್ವಾಮಿ ವಿವೇಕಾನಂದ ಕಾಲೇಜ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ಕುಣಿಗಲ್ ರಸ್ತೆ, ತುಮಕೂರು.<br>2. ಗುರುಶ್ರೀ ಕಾಲೇಜ್ ಆಫ್ ಕಾಮರ್ಸ್ & ಸೋಷಿಯಲ್ ವರ್ಕ್, ತುಮಕೂರು.<br>3. ಆಯಿಷಾ ಕಾಲೇಜ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ತುಮಕೂರು.<br>4. ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.<br>5. ಶ್ರೀ ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ತುಮಕೂರು.<br>6. ಚನ್ನಮ್ಮ ಪ್ರಥಮ ದರ್ಜೆ ಕಾಲೇಜು, ಕೋಳಾಲ, ಕೊರಟಗೆರೆ ತಾಲ್ಲೂಕು.<br>7. ಆಕ್ಸ್‌ಫರ್ಡ್ ಜೈನ್ ಕಾಲೇಜು, ರಾಜ್ ಕಿರಣ್ ಬಿಲ್ಡಿಂಗ್, ಬಾರ್ ಲೈನ್ ರಸ್ತೆ, ತುಮಕೂರು.<br>8. ಎಸ್.ಕೆ.ಟಿ.ಡಿ. ಪ್ರಥಮ ದರ್ಜೆ ಕಾಲೇಜು, ಬೆಳಗುಂಬ, ತುಮಕೂರು.<br>9. ಶ್ರೀ ಸಿದ್ಧಗಂಗಾ ಮಹಿಳಾ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>10. ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>11. ಎಸ್. ವಿ. ಎಸ್. ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ರಸ್ತೆ, ತುಮಕೂರು.<br>12. ಶ್ರೀ ವಿದ್ಯೋದಯ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>13. ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಪದವಿ ಕಾಲೇಜು, ಸಿದ್ಧಗಂಗಾ ಮಠ, ತುಮಕೂರು.<br>14. ಸರ್ವೋದಯ ಇನ್‌ಸ್ಟಿಟ್ಯೂಟ್ ಆಫ್ ಗ್ರಾಜುಯೇಟ್ ಸ್ಟಡೀಸ್, ಹೊರಪೇಟೆ.<br>15. ಗ್ರೀನ್ ಮೌಂಟೇನ್ ಕಾಲೇಜು, ಸದಾಶಿವನಗರ, ತುಮಕೂರು.<br>16. ಅರುಣ ಕಾಲೇಜ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್ ಸ್ಟಡೀಸ್, ರಿಂಗ್ ರಸ್ತೆ, ಮರಳೂರು, ತುಮಕೂರು.<br>17. ಸುಫಾ ಇನ್ಸ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಗೂಳೂರು.<br>18. ಬಾಪೂಜಿ ಪ್ರಥಮ ದರ್ಜೆ ಕಾಲೇಜು, ಹಳೇ ಕೆ.ಇ. ಬಿ. ರಸ್ತೆ, ಕೋತಿ ತೋಪು, ತುಮಕೂರು.<br>19. ವರದರಾಜ ಪ್ರಥಮ ದರ್ಜೆ ಕಾಲೇಜು, ತುಮಕೂರು. |

| | | |
|---|---|---|
| | | 20. ಬಸವೇಶ್ವರ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>21. ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>22. ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (S.S.I.B.M.), ತುಮಕೂರು.<br>23. ಸಾರಂಗ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ & ಕಂಪ್ಯೂಟರ್ ಅಪ್ಲಿಕೇಷನ್ಸ್, ಗೂಳೂರು.<br>24. ಆರ್ಯ ಭಾರತಿ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>25. ಆಕಾಶ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಎಸ್.ಎಸ್ ಪುರಂ, ತುಮಕೂರು.<br>(ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಎಸ್. ಎಸ್. ಪುರಂ, ತುಮಕೂರು.)<br>26. ಅನನ್ಯ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ತುಮಕೂರು.<br>27. ಸೇಕ್ರೆಡ್ ಹಾರ್ಟ್ ಪ್ರಥಮ ದರ್ಜೆ ಕಾಲೇಜು, ಉಪ್ಪಾರಹಳ್ಳಿ, ತುಮಕೂರು.<br>28. ಶ್ರೀ ಉಮಾಪ್ರಗತಿ ಪ್ರಥಮ ದರ್ಜೆ ಕಾಲೇಜು, ಕ್ಯಾತ್ಸಂದ್ರ, ತುಮಕೂರು.<br>29. ಎಸ್. ಆರ್. ಎಸ್. ಪ್ರಥಮ ದರ್ಜೆ ಕಾಲೇಜು, ತುಮಕೂರು.<br>30. ಶ್ರೀ ರಾಜೀವ್ ಗಾಂಧಿ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>31. ಇಂದಿರಾ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>32. ಸರ್ವೋದಯ ಪ್ರಥಮ ದರ್ಜೆ ಕಾಲೇಜು, ಸತ್ಯಮಂಗಲ, ತುಮಕೂರು.<br>33. ವಿದ್ಯಾ ಪ್ರಥಮ ದರ್ಜೆ ಕಾಲೇಜು, ತುಮಕೂರು.<br>34. ವಿದ್ಯಾವಾಹಿನಿ ಪ್ರಥಮ ದರ್ಜೆ ಕಾಲೇಜು, ಪುಟ್ಟಾಂಜನೇಯ ಸ್ವಾಮಿ ದೇವಸ್ಥಾನದ ಹಿಂಭಾಗ, ಕುವೆಂಪು ನಗರ, ತುಮಕೂರು.<br>35. ಹೇಮಾದ್ರಿ ಪ್ರಥಮ ದರ್ಜೆ ಕಾಲೇಜು, ಶ್ರೀ ರಂಗಪ್ಪ ಬಡಾವಣೆ, ಸ್ವಾಂದೇನಹಳ್ಳಿ ರಸ್ತೆ, ಸತ್ಯಮಂಗಲ, ತುಮಕೂರು.<br>36. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾವಿ.<br>37. ಶ್ರೀ ಸಿಂಗದೂರೇಶ್ವರಿ ಪದವಿ ಕಾಲೇಜು, ದೊಡ್ಡೇರಿ ಹತ್ತಿರ, ಬೆಳ್ಳಾವಿ-ಚೇಳೂರು ಮುಖ್ಯರಸ್ತೆ,<br>38. ಗ್ಲೋಬಲ್ ಶಾಹೀನ್ ಕಾಲೇಜು, ಭೀಮಸಂದ್ರ<br>39. ಯೂನಿಯನ್ ಕ್ರಿಶ್ಚಿಯನ್ ಕಾಲೇಜು, ತುಮಕೂರು.<br>40. ಶೇಷಾದ್ರಿಪುರಂ ಕಾಲೇಜು, ಗಂಗಸಂದ್ರ ರಸ್ತೆ, ವೀರಸಾಗರ ಬಡಾವಣೆ, ಮೆಳೆಕೋಟೆ, ತುಮಕೂರು.<br>41. ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ತುಮಕೂರು.<br>42. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು<br>43. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತುಮಕೂರು.<br>44. ಶ್ರೀದೇವಿ ಪದವಿ ಕಾಲೇಜು, ತುಮಕೂರು<br>45. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬೂರು. |

| | | |
|---|---|---|
| 02 | ಸಿ. ಐ. ಟಿ. ಪ್ರಥಮ ದರ್ಜೆ ಕಾಲೇಜು, ಗುಬ್ಬಿ. (2005) | 1. ಸಿದ್ಧಶ್ರೀ ಪ್ರಥಮ ದರ್ಜೆ ಕಾಲೇಜು, ನಿಟ್ಟೂರು.<br>2. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್. ಪುರ, ಗುಬ್ಬಿ ತಾಲ್ಲೂಕು.<br>3. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ. |
| 03 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು. (5005) | 1. ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.<br>2. ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು.<br>3. ಉದಯಭಾರತಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತಿಪಟೂರು.<br>4. ಬಸವೇಶ್ವರ ಪ್ರಥಮ ದರ್ಜೆ ಕಾಲೇಜು, ಮಡೇನೂರು ಗೇಟ್, ತಿಪಟೂರು.<br>5. ನವೋದಯ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ.<br>6. ಶ್ರೀ ಮಲ್ಲಿಕಾರ್ಜುನ ಸ್ವಾಮಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ.<br>7. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ.<br>8. ಬಿ. ಎಂ. ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು. |
| 04 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವೇಕೆರೆ. (5501) | 1. ಉದಯಭಾರತಿ ಪ್ರಥಮ ದರ್ಜೆ ಕಾಲೇಜು, ತುರುವೇಕೆರೆ.<br>2. ಗ್ಲೋಬಲ್ ಎಂಬಸ್ಸಿ ಪ್ರಥಮ ದರ್ಜೆ ಕಾಲೇಜು, ವಿದ್ಯಾನಗರ, ತುರುವೇಕೆರೆ.<br>3. ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ.<br>4. ಎಸ್. ಬಿ. ಜಿ. ಪ್ರಥಮ ದರ್ಜೆ ಕಾಲೇಜು, ಮಾಯಸಂದ್ರ, ತುರುವೇಕೆರೆ ತಾಲ್ಲೂಕ್. |
| 05 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್. (3001) | 1. ಚಾಣಕ್ಯ ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಕುಣಿಗಲ್.<br>2. ವೆಂಕಟೇಶ್ವರ ಪ್ರಥಮ ದರ್ಜೆ ಕಾಲೇಜು, ಹುಲಿಯೂರುದುರ್ಗ, ಕುಣಿಗಲ್ ತಾಲ್ಲೂಕ್.<br>3. ಹೋಲಿ ಟ್ರಿನಿಟಿ ಕಾಲೇಜು, ಕುಣಿಗಲ್. |
| 06 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ. (4501) | 1. ಶ್ರೀ ರಂಗನಾಥ ಪ್ರಥಮ ದರ್ಜೆ ಕಾಲೇಜು, ಶಿರಾ.<br>2. ಶ್ರೀ ಕನಕ ಪ್ರಥಮ ದರ್ಜೆ ಕಾಲೇಜು, ಬರಗೂರು, ಶಿರಾ ತಾಲ್ಲೂಕು.<br>3. ಆಂಜನೇಯಸ್ವಾಮಿ ಪ್ರಥಮ ದರ್ಜೆ ಕಾಲೇಜು, ಬರಗೂರು, ಶಿರಾ ತಾಲ್ಲೂಕು.<br>4. ಜ್ಞಾನಜ್ಯೋತಿ ಪ್ರಥಮ ದರ್ಜೆ ಕಾಲೇಜು, ಬರಗೂರು, ಶಿರಾ ತಾಲ್ಲೂಕು.<br>5. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬುಕ್ಕಾಪಟ್ಟಣ.<br>6. ಶ್ರೀ ಗಂಗಾಧರೇಶ್ವರ ಕಲಾ ಪ್ರಥಮ ದರ್ಜೆ ಕಾಲೇಜು, ತೋವಿನಕೆರೆ. |

| | | |
|---|---|---|
| 07 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ (3501) | 1. ಸರ್ಕಾರಿ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ.<br>2. ಮಂಗಳ ಕಲಾ ಪ್ರಥಮ ದರ್ಜೆ ಕಾಲೇಜು, ಕೊಡಗೇನಹಳ್ಳಿ.<br>3. ರಾಘವೇಂದ್ರ ಪ್ರಥಮ ದರ್ಜೆ ಕಾಲೇಜು, ಶಂಕರಮಠ ರಸ್ತೆ, ರಾಘವೇಂದ್ರ ಬಡಾವಣೆ, ಮಧುಗಿರಿ.<br>4. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ, ಮಧುಗಿರಿ ತಾಲ್ಲೂಕು.<br>5. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಿಡಿಗೇಶಿ, ಮಧುಗಿರಿ ತಾಲ್ಲೋಕ್.<br>6. ಶ್ರೀ ಟಿ. ವಿ. ವೆಂಕಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ. |
| 08 | ಶ್ರೀಮತಿ & ಶ್ರೀ ವೈ. ಇ. ರಂಗಯ್ಯ ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ (4001) | 1. ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಪಾವಗಡ.<br>2. ಸ್ವಾಮಿ ವಿವೇಕಾನಂದ ಪ್ರಥಮ ದರ್ಜೆ ಕಾಲೇಜು, ಪಾವಗಡ.<br>3. ವಿದ್ಯೋದ್ಭವ ಪ್ರಥಮ ದರ್ಜೆ ಕಾಲೇಜು, ಅಂಗದಹಳ್ಳಿ, ಪಾವಗಡ.<br>4. ಆರ್. ವಿ. ಪಿ. ಪ್ರಥಮ ದರ್ಜೆ ಕಾಲೇಜು, ವೈ. ಎನ್. ಹೊಸಕೋಟೆ, ಪಾವಗಡ.<br>5. ಶಾಂತಿ ಎಸ್.ಎಸ್.ಕೆ. ಪ್ರಥಮ ದರ್ಜೆ ಕಾಲೇಜು, ಪಾವಗಡ.<br>6. ಶ್ರೀ ಕೃಷ್ಣ ಪ್ರಥಮ ದರ್ಜೆ ಕಾಲೇಜು, ಪಾವಗಡ.<br>7. ಶ್ರೀ ವೆಂಕಟೇಶ್ವರ ಪ್ರಥಮ ದರ್ಜೆ ಕಾಲೇಜು, ಪಾವಗಡ. |

30/7/25

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು